ವಿಜಯ ಕರ್ನಾಟಕ

# ಜೈನ್ ಕಾಲೇಜಿನಲ್ಲಿ ರಂಜಿಸಿದ ಕನ್ನಡ ಹಬ್ಬ

**ವಿಕ ಸುದ್ದಿಲೋಕ** ಬೆಂಗಳೂರು

ವಿವಿ ಪುರದ ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜಿನಲ್ಲಿ ಮಂಗಳವಾರ ಸಂಭ್ರಮದ ಕನ್ನಡ ಹಬ್ಬ ನಡೆಯಿತು.

ಕಾಲೇಜಿನ 'ಹೊಂಗಿರಣ' ಕನ್ನಡ ವೇದಿಕೆಯು ಕನ್ನಡ ಹಬ್ಬವನ್ನು ಆಯೋಜಿಸಿತ್ತು. ಕಾರ್ಯಕ್ರಮದ ಆರಂಭದಲ್ಲಿ ನಟ ಡಾ. ಅಂಬರೀಷ್‌ಗೆ ಗೌರವಪೂರ್ವ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ನಂತರ 75 ವಿದ್ಯಾರ್ಥಿಗಳ ಸಮೂಹ ಹಾಗೂ ವಾದ್ಯಗಳೊಂದಿಗೆ ಪ್ರಾರಂಭವಾದ ನಾಡಗೀತೆಯು ಸೊಗಸಾಗಿ ಮೂಡಿಬಂತು. ಕಾಲೇಜಿನಲ್ಲಿದ್ದ ಎಲ್ಲರೂ ಧ್ವನಿ ಗೂಡಿಸಿದರು.

ಕಾಲೇಜಿನ ನಾನಾ ತಂಡಗಳು ಪ್ರದರ್ಶಿಸಿದ ಡೊಳ್ಳು ಕುಣಿತ, ಯಕ್ಷಗಾನದಂತಹ ಜಾನಪದ ಕಲೆಗಳು ನೋಡುಗರನ್ನು ಸಂತಸಗೊಳಿಸಿದವು. ಶಾಸ್ತ್ರೀಯ ನೃತ್ಯ, ಚಲನಚಿತ್ರ ಗೀತೆ ನೃತ್ಯ ಕಾರ್ಯಕ್ರಮ ಶೋಭೆ ನೀಡಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರಂಗಭೂಮಿ ಕಲಾವಿದ ಸುಚೇಂದ್ರ ಪ್ರಸಾದ್ ಮಾತನಾಡಿ, 'ಕನ್ನಡ ಭಾಷೆಯ ಬಗೆಗೆ ಇಂದಿನ ಯುವಪೀಳಿಗೆ ಕಾಳಜಿ ತೋರದೆ ಹೋದರೆ ಮುಂದೊಂದು ದಿನ ಅದು ದಹನವಾಗುತ್ತದೆ' ಎಂದು ಎಚ್ಚರಿಸಿದರು.



ಕಾರ್ಯಕ್ರಮದಲ್ಲಿ ನಟ ಸುಚೇಂದ್ರ ಪ್ರಸಾದ್ ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಕನ್ನಡ ಸಾಹಿತ್ಯದ ಜತೆಗೆ ಬಸವನಗುಡಿಯ ಸಾಂಸ್ಕೃತಿಕ, ಆಧ್ಯಾತ್ಮಿಕ ಹಾಗೂ ಐತಿಹಾಸಿಕ ಸಂಗತಿಗಳ ಬಗೆಗೆ ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ವಿಜೇತರಿಗೆ ವಿವೇಕಾನಂದರ ಪುಸ್ತಕಗಳನ್ನು ಬಹುಮಾನವಾಗಿ ನೀಡಿ ಗೌರವಿಸಲಾಯಿತು. ಜತೆಗೆ ಯಕ್ಷಗಾನ ಕಲಾವಿದ ಡಾ. ಶಿವಕುಮಾರ್ ಬೇಗಾರ್, ರಂಗಭೂಮಿ ಕಲಾವಿದ ಸುಚೇಂದ್ರ ಪ್ರಸಾದ್ ಅವರನ್ನು ಕಾಲೇಜು ವತಿಯಿಂದ ಗೌರವಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ಎನ್. ನಟರಾಜ್, ಜೈನ್ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನಿರ್ದೇಶಕ ಡಾ. ಬಿ.ಟಿ. ವೆಂಕಟೇಶ್, ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಂ. ರೇಣುಕ ಮತ್ತಿತರರು ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ಧೃತಿ, ಡಾ. ಎಸ್.ಸಿ. ವಿಜಯ, ಅಭಿಜ್ಞಾ, ಶಶಿಕಾಂತ್, ಮೇಖಲಾ ಮತ್ತಿತರರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.